## GOVERNMENT OF KARNATAKA

No. HFW 90 ACS 2021

Karnataka Government Secretariat
Vidhana Soudha
Bengaluru, date: 2.4.2021

## ORDER

Whereas, the State Disaster Management Authority (SDMA) is satisfied that the Karnataka is again under threat of spread of COVID-19 epidemic, which has already been declared as a pandemic by the World Health Organization, and has considered it necessary to take effective measures to prevent its spread in the State.

And whereas, the situation of COVID-19 in Karnataka has been reviewed and it has been observed that there has been a persistent rise in the number of COVID-19 cases in the State during the last one month. Further, a large number of social, religious and public gatherings like marriages, political rallies are being witnessed in which COVID Appropriate Behaviour is not being followed which may cause a setback in the appreciable gains made in the suppression of chain of transmission of Covid-19 cases in Karnataka.

Now, therefore, in exercise of powers conferred under section 22 of the Disaster Management Act, 2005, the undersigned, in his capacity as Chairperson, State Executive Committee, SDMA, hereby directs Commissioner, BBMP, Deputy Commissioners, and all authorities concerned to ensure that following restrictions shall be enforced, along with the observance of COVID Appropriate Behaviour (CAB).

The Chief Commissioner, BBMP, all Deputy Commissioners, and all authorities concerned shall ensure strict compliance of this order and shall adequately inform and sensitize the field functionaries about these instructions as shown below for strict compliance, in letter and spirit.

1. Classes 6 to 9 including Vidyagama shall be suspended. Classes 10, 11 &12 can continue in the existing mode. However, attendance to these classes in person is not mandatory.
2. Classes of higher & professional courses shall be suspended, except classes due for Board/University examinations and of Health Sciences.
3. Boarding schools and residential hostels shall be closed, except for the students of classes 10, 11, 12 and for students of higher and professional courses appearing in Board/University examination and Health Sciences.
4. In the places of worships individuals are permitted to visit and offer prayers only. There shall be no gatherings, functions, etc.
5. In Apartment complexes, the common facilities like gym, party hall, club house, swimming pool, etc shall remain closed.
6. Gym and Swimming Pools shall remain closed.
7. Rallies, dharnas, etc for any reason shall be prohibited.
8. Number of persons in public transport, shall not exceed the seating capacity.
9. The practice of work from home shall be followed in offices and work places as far as possible.
10. In Cinema Halls, alternate seating subject to a maximum of 50% seating capacity only shall be allowed in the districts of Bengaluru Urban & Rural including BBMP, Mysuru, Kalburgi, Dakshin Kannada, Udupi, Bidar and Dharwad. Strict COVID Appropriate Behavior (CAB) like ensuring wearing of masks, physical distancing, provision of hand sanitizer/hand wash shall be enforced.
11. In the districts of Bengaluru Urban & Rural including BBMP, Mysuru, Kalburgi, Dakshin Kannada, Udupi, Bidar and Hubali-Dharwad. number of customers in Pubs, bars, clubs, restaurants shall not exceed 50% of the capacity.

12. Strict COVID Appropriate Behavior (CAB) like ensuring wearing of masks, physical distancing, provision of hand sanitizer/hand wash shall be enforced. If there is any violation in Pubs, bars, clubs, restaurants, the facility shall be closed till the covid epidemic is over.

13. In Shopping Malls, closed markets, departmental stores, etc strict enforcement of Covid Appropriate Behavior (CAB) like ensuring wearing of masks, physical distancing, provision of hand sanitizer/hand wash shall be enforced. If there is any violation, the facility shall be closed till the covid epidemic is over.

14. The restrictions on public gatherings and congregations during religious festivals and jathras/fairs shall continue

15. The number of persons permitted for different activities will continue as per the circular issued on 12-3-2021

16. The existing regulations/orders regarding wearing of masks and maintaining physical distancing in public places shall be strictly implemented by the Police authorities and local bodies.

In case any person is found violating the aforesaid instructions, the defaulting person(s) shall be proceeded against as per the provisions of section 51 to 60 of Disaster Management Act, 2005, Section 188 of IPC and Section 4, 5 and 10 of the Karnataka Epidemic Diseases Act, 2020.

The above restrictions and prohibitions will be in effect till 20.04.2021.

(P. Ravi Kumar)
Chief Secretary & Chairperson, State
Executive Committee, SDMA

To:
The Compiler, Karnataka Gazette, Bangalore for publication in the Special Gazette immediately.

**Copy for information, compliance and circulation to all the concerned :**

1. The Additional chief secretary to Government, Health and Family Welfare Department, Bengaluru.
2. The Additional Chief Secretary to Government, Education Department (Primary and Secondary), Bengaluru.
3. The Additional Chief Secretary to Government, Higher Education Department, Bengaluru.
4. The Principal Secretary to Government, Medical Education Department, Bengaluru.
5. The Principal Secretary to Government, Social Welfare Department, Bengaluru.
6. The Principal Secretary to Government, Revenue Department, Bengaluru.
7. All the Regional Commissioners in the State of Karnataka.
8. The Chief Commissioner, BBMP
9. The Commissioner of police, Bengaluru.
10. The Commissioner, Department of Health and Family Welfare, Bangalore.
11. The Mission Director, NHM Bangalore
12. The Special Commissioner, BBMP.
13. All the Deputy Commissioners in the State of Karnataka.
14. All the Superintendents of police in the State of Karnataka
15. The Director, Department of Health and Family Welfare, Bangalore.
16. All Divisional / Joint Directors, Health and Family Welfare Department.
17. Chief Health Officer, BBMP.
18. All the District Health Officers / District Surgeons / Administrative Medical Officers and Taluk Medical Officers and Medical Superintendents of all General Hospitals in Karnataka.

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 90 ಎಸಿಎಸ್ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 02.04.2021

## ಆದೇಶ

ವಿಶ್ವ ಆರೋಗ್ಯ ಸಂಸ್ಥೆಯು ಈಗಾಗಲೇ ಸಾಂಕ್ರಾಮಿಕ ರೋಗವೆಂದು ಘೋಷಿಸಿರುವ ಕೋವಿಡ್ 19 ಸೋಂಕಿನ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (SDMA)ದ ಅಡಿಯಲ್ಲಿ ಪರಿಣಾಮಕಾರಿಯಾಗಿ ಕ್ರಮಗಳನ್ನು ರಾಜ್ಯದಲ್ಲಿ ಕೈಗೊಳ್ಳಲಾಗಿದೆ.

ಕರ್ನಾಟಕ ರಾಜ್ಯದ ಕೋವಿಡ್ 19 ಪರಿಸ್ಥಿತಿಯನ್ನು ಪರಿಶೀಲಿಸಿದಾಗ, ಕಳೆದ ಒಂದು ತಿಂಗಳ ಅವಧಿಯಲ್ಲಿ ಕೋವಿಡ್ 19 ಪ್ರಕರಣಗಳು ನಿರಂತುರವಾಗಿ ಏರಿಕೆಯಾಗುತ್ತಿರುವುದನ್ನು ಗಮನಿಸಲಾಗಿದೆ. ಮುಂದುವರೆದು, ಬೃಹತ್ ಸಂಖ್ಯೆಯಲ್ಲಿ ನಡೆಯುತ್ತಿರುವ ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಸಭೆ ಸಮಾರಂಭಗಳಾದ ಮದುವೆಗಳು ರಾಜಕೀಯ ರ್ಯಾಲಿಗಳ ಸಂದರ್ಭದಲ್ಲಿ, ಕೋವಿಡ್ ಮುನ್ನೆಚ್ಚರಿಕೆಯ ಸೂಕ್ತ ವರ್ತನೆಗಳು ಪಾಲನೆಯಾಗದ ಹಿನ್ನೆಲೆಯಲ್ಲಿ, ಈವರೆಗೆ ಕೋವಿಡ್ 19 ಸೋಂಕಿನ ಪ್ರಸರಣ ಸರಪಳಿಯನ್ನು ನಿಗ್ರಹಿಸುವಲ್ಲಿ ರಾಜ್ಯವು ಸಾಧಿಸಿರುವ ಗಮನಾರ್ಹ ಲಾಭಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಪ್ರಸ್ತುತ, ಆದ್ದರಿಂದ, ವಿಪತ್ತು ನಿರ್ವಹಣಾ ಕಾಯ್ದೆ 2005 ರ ವಿಭಾಗ 22ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರ ಸಾಮರ್ಥ್ಯದಿಂದ ಈ ಕೆಳಸಹಿದಾರನಾಗಿ, ಆಯುಕ್ತರು, ಬಿ.ಬಿ.ಎಂ.ಪಿ, ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಎಲ್ಲಾ ಪ್ರಾಧಿಕಾರಗಳಿಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ, ಇನ್ನು ಮುಂದೆ ವಿವಿಧ ಸಾಮಾಜಿಕ/ಧಾರ್ಮಿಕ ಸಮಾರಂಭಗಳು ಹಾಗೂ ರಾಜಕೀಯ ಸಭೆಗಳು/ರ್ಯಾಲಿಗಳು ಇತ್ಯಾದಿಗಳ ಸಂದರ್ಭದಲ್ಲಿ ಸೇರಬಹುದಾದ ಸಾರ್ವಜನಿಕರ ಸಂಖ್ಯೆಯನ್ನು ಈ ಕೆಳಕಂಡಂತೆ ಮಿತಿಗೊಳಿಸುವುದು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಬಂಧಿಸಲಾಗಿರುವ ಆಚರಣೆ/ಸಮಾರಂಭ ಇತ್ಯಾದಿಗಳ ಸಂದರ್ಭದಲ್ಲಿ ಕೋವಿಡ್ ನಿಯಂತ್ರಣಕ್ಕೆ ಸೂಕ್ತ ವರ್ತನೆಗಳನ್ನು ಪಾಲಿಸುವಂತೆ ಖಚಿತಪಡಿಸಿಕೊಳ್ಳಲು ಆದೇಶಿಸಿದೆ.

ಮುಖ್ಯ ಆಯುಕ್ತರು, ಬಿಬಿಎಂಪಿ, ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಎಲ್ಲಾ ಪ್ರಾಧಿಕಾರಗಳು ಈ ಆದೇಶವು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳುವುದು. ಮತ್ತು ಸದರಿ ಆದೇಶ ಬಗ್ಗೆ ಸೂಕ್ತ ಮಾಹಿತಿಯನ್ನು ಕ್ಷೇತ್ರ ಕಾರ್ಯಕಾರಿಗಳಿಗೆ (field functionaries) ನೀಡುವುದು, ಈ ನಿಯಮಗಳು ರೂಪ ಹಾಗೂ ವಿಷಯದಲ್ಲಿ ಯಥಾವತ್ತಾಗಿ ಅನುಪಾಲನೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಸೂಚಿಸಿದೆ.

1. ವಿದ್ಯಾಗಮವೂ ಸೇರಿದಂತೆ 6 ರಿಂದ 9 ನೇ ತರಗತಿಗಳನ್ನು ಸ್ಥಗಿತಗೊಳಿಸಲಾಗಿದೆ. 10, 11 ಹಾಗೂ 12 ನೇ ತರಗತಿಗಳು ಪ್ರಸ್ತುತ ಇರುವಂತೆಯೇ ಮುಂದುವರೆಯುತ್ತವೆ. ಆದಾಗ್ಯೂ, ತರಗತಿಗಳಿಗೆ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರುವುದಿಲ್ಲ.
2. ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸ್‌ಗಳ ತರಗತಿಗಳಲ್ಲಿ ಮಂಡಳಿಯ /ವಿಶ್ವವಿದ್ಯಾಲಯಗಳ ಪರೀಕ್ಷೆ ಬರೆಯುವ ಹಾಗೂ ವೈದ್ಯಕೀಯ ಶಿಕ್ಷಣದ ತರಗತಿಗಳನ್ನು ಹೊರತು ಪಡಿಸಿ, ಇತರ ಎಲ್ಲಾ ತರಗತಿಗಳನ್ನು ಸ್ಥಗಿತಗೊಳಿಸಲಾಗಿದೆ.

3. ವಸತಿ ಶಾಲೆಗಳು ಹಾಗೂ ಬೋರ್ಡಿಂಗ್ ಇರುವ ಶಾಲೆಗಳಲ್ಲಿ 10, 11 ಹಾಗೂ 12ನೇ ತರಗತಿಯ ಬೋರ್ಡ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು, ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸ್‌ಗಳ ವಿಶ್ವವಿದ್ಯಾಲಯಗಳ ಪರೀಕ್ಷೆ ಬರೆಯುವವರು ಮತ್ತು ವೈದ್ಯಕೀಯ ಶಿಕ್ಷಣದ ತರಗತಿಗಳನ್ನು ಹೊರತುಪಡಿಸಿ, ಇತರ ಎಲ್ಲಾ ತರಗತಿಗಳನ್ನು ಸ್ಥಗಿತಗೊಳಿಸಲಾಗಿದೆ.

4. ಧಾರ್ಮಿಕ ಸ್ಥಳಗಳಲ್ಲಿ ವೈಯಕ್ತಿಕವಾಗಿ ಪ್ರಾರ್ಥನೆ ಮಾಡಲು ಅವಕಾಶವಿರುತ್ತದೆ, ಆದರೆ ಗುಂಪು ಸೇರುವ ಕಾರ್ಯಕ್ರಮಗಳಿಗೆ ಅವಕಾಶವಿರುವುದಿಲ್ಲ.

5. ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ಗಳಲ್ಲಿ, ಸಾಮಾನ್ಯವಾಗಿ ನಿವಾಸಿಗಳು/ಜನರು ಸೇರುವ ಸ್ಥಳಗಳಾದ ಜಿಮ್, ಪಾರ್ಟಿ ಹಾಲ್‌ಗಳು/ಕ್ಲಬ್ ಹೌಸ್‌ಗಳು, ಈಜು ಕೊಳಗಳು, ಇತ್ಯಾದಿಗಳು ಮುಚ್ಚಲ್ಪಟ್ಟಿರುತ್ತವೆ.

6. ಉಳಿದಂತೆ ಎಲ್ಲಾ ಜಿಮ್‌ಗಳು ಹಾಗೂ ಈಜುಕೊಳಗಳು ಮುಚ್ಚಲ್ಪಟ್ಟಿರುತ್ತವೆ.

7. ಯಾವುದೇ ತರಹದ ರ್‍ಯಾಲಿಗಳು, ಮುಷ್ಕರ, ಧರಣಿ ಇತ್ಯಾದಿಗಳನ್ನು ನಿಷೇಧಿಸಲಾಗಿದೆ.

8. ಸಾರ್ವಜನಿಕ ಸಾರಿಗೆಗಳಲ್ಲಿ ಪ್ರಯಾಣಿಕರ ಸಂಖ್ಯೆಯು ನಿಗಧಿಪಡಿಸಿರುವ ಆಸನದ ವ್ಯವಸ್ಥೆಯನ್ನು ಮೀರುವಂತಿಲ್ಲ.

9. ಕಛೇರಿಗಳು ಹಾಗೂ ಇತರ ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಸಾಧ್ಯವಾದಷ್ಟು ಮನೆಯಿಂದಲೇ ಕೆಲಸ ನಿರ್ವಹಿಸುವ ಅಭ್ಯಾಸ / ವ್ಯವಸ್ಥೆಯನ್ನು ಪಾಲಿಸುವುದು.

10. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಬಿ.ಬಿ.ಎಂ.ಪಿ ಸೇರಿದಂತೆ, ಮೈಸೂರು, ಕಲಬುರಗಿ, ದಕ್ಷಿಣ ಕನ್ನಡ, ಉಡುಪಿ, ಬೀದರ್ ಮತ್ತು ಧಾರವಾಡ ಜಿಲ್ಲೆಗಳ ಸಿನಿಮಾ ಹಾಲ್‌ಗಳಲ್ಲಿ ಪರ್ಯಾಯ ಆಸನಗಳಲ್ಲಿ ಕೂರುವಂತೆ/ಒಂದು ಬಿಟ್ಟೊಂದಾದ ಸೀಟ್‌ಗಳಲ್ಲಿ ಕುಳಿತುಕೊಳ್ಳುವಂತೆ ಗರಿಷ್ಠ 50% ವೀಕ್ಷಕರಿಗೆ ಮಾತ್ರ ಅವಕಾಶ ಕಲ್ಪಿಸುವುದು.

11. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಬಿ.ಬಿ.ಎಂ.ಪಿ ಸೇರಿದಂತೆ, ಮೈಸೂರು, ಕಲಬುರಗಿ, ದಕ್ಷಿಣ ಕನ್ನಡ, ಉಡುಪಿ, ಬೀದರ್ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪಬ್, ಬಾರ್, ಕ್ಲಬ್, ರೆಸ್ಟೋರೆಂಟ್‌ಗಳಲ್ಲಿ ಗರಿಷ್ಠ ಗ್ರಾಹಕರ ಸಂಖ್ಯೆಯು ಶೇ.50ರಷ್ಟು ಮೀರುವಂತಿಲ್ಲ.

12. ಕೋವಿಡ್ ಮುನ್ನೆಚ್ಚರಿಕೆಗಾಗಿ ಸೂಕ್ತ ವರ್ತನೆಗಳನ್ನು (Covid Appropriate Behavior - CAB) ಕಡ್ಡಾಯವಾಗಿ ಮುಖಗವಸು, ದೈಹಿಕ ಅಂತರ ಪಾಲನೆ, ಹ್ಯಾಂಡ್ ಸ್ಯಾನಿಟೈಸರ್, ಹ್ಯಾಂಡ್ ವಾಷ್‌ಗಳ ಬಳಕೆಯನ್ನು ಜಾರಿಗೊಳಿಸುವುದು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಸದರಿ ಪಬ್, ಬಾರ್, ಕ್ಲಬ್, ರೆಸ್ಟೋರೆಂಟ್‌ಗಳನ್ನು ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿ ಕೊನೆಗೊಳ್ಳುವವರೆಗೂ ಮುಚ್ಚಲಾಗುವುದು.

13. ಶಾಪಿಂಗ್ ಮಾಲ್‌ಗಳು, ಮುಚ್ಚಿದ ಪ್ರದೇಶಗಳಲ್ಲಿರುವ ಮಾರ್ಕೆಟ್‌ಗಳು ಹಾಗೂ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಲ್ಲಿ ಶಿಷ್ಟಾಚಾರದನ್ವಯ ಕೋವಿಡ್ ಮುನ್ನೆಚ್ಚರಿಕೆಗಾಗಿ ಸೂಕ್ತ ವರ್ತನೆಗಳನ್ನು (Covid Appropriate Behavior - CAB) ಅಂದರೆ, ಕಡ್ಡಾಯವಾಗಿ ಮುಖಗವಸು, ದೈಹಿಕ ಅಂತರ ಪಾಲನೆ, ಹ್ಯಾಂಡ್ ಸ್ಯಾನಿಟೈಸರ್, ಹ್ಯಾಂಡ್ ವಾಷ್‌ಗಳ ಬಳಕೆಯನ್ನು ಜಾರಿಗೊಳಿಸುವುದು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮೇಲಿನ ಸ್ಥಳಗಳನ್ನು ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿ ಕೊನೆಗೊಳ್ಳುವವರೆಗೂ ಮುಚ್ಚಲಾಗುವುದು.

14. ಸಾರ್ವಜನಿಕ ಸ್ಥಳಗಳಲ್ಲಿ ಧಾರ್ಮಿಕ ಆಚರಣೆಗಳು ಹಾಗೂ ಜಾತ್ರೆ ಮಹೋತ್ಸವಗಳು, ಮೇಳಗಳು, ಗುಂಪು ಸೇರುವುದರ ನಿಷೇಧ ಮುಂದುವರೆಯುತ್ತದೆ.

15. ವಿವಿಧ ಸಭೆ/ಸಮಾರಂಭ ಆಚರಣೆಗಳಲ್ಲಿ ಭಾಗವಹಿಸಲು ಅವಕಾಶ ನೀಡಬಹುದಾದ ಸಾರ್ವಜನಿಕರ ಸಂಖ್ಯೆಯನ್ನು ದಿನಾಂಕ 12.03.2021ರಲ್ಲಿರುವ ಸುತ್ತೋಲೆಯಂತೆ ಮುಂದುವರಿಸಿದೆ.

16. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು ಹಾಗೂ ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದು, ಇವುಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಜಾರಿಯಲ್ಲಿರುವ ನಿಯಮ/ಆದೇಶಗಳನ್ನು ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಆಡಳಿತಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು.

ಈ ಮೇಲೆ ತಿಳಿಸಿದ ನಿಯಮಗಳನ್ನು ಯಾವುದೇ ವ್ಯಕ್ತಿ/ ವ್ಯಕ್ತಿಗಳು ಉಲ್ಲಂಘಿಸಿದ ಪಕ್ಷದಲ್ಲಿ, ಅಂತಹ ವ್ಯಕ್ತಿ/ ವ್ಯಕ್ತಿಗಳ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ, 2005 ರ ವಿಭಾಗ 51 ರಿಂದ 60 ರ ಅನ್ವಯ, ಐ ಪಿ ಸಿ ಸೆಕ್ಷನ್ 188 ರಂತೆ ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ, 2020ರ ವಿಭಾಗ 4,5 ಮತ್ತು 10 ರಂತೆ ಕ್ರಮಗಳನ್ನು ಜರುಗಿಸಲಾಗುವುದು.

ಈ ಮೇಲೆ ತಿಳಿಸಿರುವ ನಿಯಮಗಳು ಹಾಗೂ ನಿರ್ಬಂಧಗಳು 20.04.2021ರವರೆಗೆ ಚಾಲ್ತಿಯಲ್ಲಿರುತ್ತವೆ.

( ಪಿ ರವಿ ಕುಮಾರ್ )
ಮುಖ್ಯ ಕಾರ್ಯದರ್ಶಿ ಹಾಗೂ
ಅಧ್ಯಕ್ಷರು, ರಾಜ್ಯ ಕಾರ್ಯಕಾರಿ ಸಮಿತಿ,
ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ
ಕರ್ನಾಟಕ ಸರ್ಕಾರ

**ಇವರಿಗೆ ,**

ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು, ಇವರಿಗೆ ವಿಶೇಷ ಗೆಜೆಟ್‌ನಲ್ಲಿ ತುರ್ತಾಗಿ ಪ್ರಕಟಿಸಲು.

ಪ್ರತಿಯನ್ನು ಮಾಹಿತಿಗಾಗಿ, ಕ್ರೂಢೀಕರಣ ಹಾಗೂ ಪ್ರಸಾರಕ್ಕಾಗಿ,

1. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
2. ಸರ್ಕಾರದಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ.ಬೆಂಗಳೂರು.
3. ಸರ್ಕಾರದಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.ಬೆಂಗಳೂರು.
4. ಸರ್ಕಾರದಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕಹಾಗೂಪ್ರೌಢಶಿಕ್ಷಣ ಇಲಾಖೆ.ಬೆಂಗಳೂರು.
5. ಸರ್ಕಾರದಪ್ರಧಾನಕಾರ್ಯದರ್ಶಿಗಳು,ಸಮಾಜ ಕಲ್ಯಾಣ ಇಲಾಖೆ.ಬೆಂಗಳೂರು.
6. ಆಯುಕ್ತರು,ಧಾರ್ಮಿಕ ದತ್ತಿ ಇಲಾಖೆ.ಬೆಂಗಳೂರು.
7. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು.
8. ಆಯುಕ್ತರು, ಬಿ ಬಿ ಎಂ ಪಿ, ಬೆಂಗಳೂರು
9. ಪೊಲೀಸ್ ಆಯುಕ್ತರು, ಬೆಂಗಳೂರು.
10. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
11. ಅಭಿಯಾನ ನಿರ್ದೇಶಕರು, ಎನ್ ಹೆಚ್ ಎಂ, ಬೆಂಗಳೂರು.